ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ಸಿಸಿ ಸಂಖ್ಯೆ: **1220 / 2023**

ದಿನಾಂಕ: **25.02.2025**

ಪಿರ್ಯಾದುದಾರರು: ರಾಜ್ಯದ ಪರವಾಗಿ ನಗರ ಠಾಣಾ ಪೋಲಿಸರು

ವಿರುದ್ಧ

ಆರೋಪಿತರು: ಅಹಮದ್ ಖಬೀರ್

ದೋಷಾರೋಪಣೆ

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ಸಿ.ವೀರಭದ್ರಯ್ಯ ಎಂ.ಎ., ಎಲ್‌ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ಆರೋಪಣೆ ಏನೆಂದರೆ:

ದಿನಾಂಕ: **15.8.2021** ರ ರಾತ್ರಿ ವೇಳೆಯಲ್ಲಿ ಆರೋಪಿಯಾದ ನೀವು ಚಿಕ್ಕಮಗಳೂರು ನಗರ ಠಾಣಾ ವ್ಯಾಪ್ತಿಯ ನಗರದ ಜ್ಯೋತಿನಗರ ಅಂಚೆ ದಂಟರಮಕ್ಕಿ ಗ್ರಾಮದ ಚರ್ಚ್ ಎದುರು ಇರುವ ಚಿಕ್ಕಮಗಳೂರು ನಲ್ಲಿರುವ ಚಾಸಾ:**1** ರವರ ಮನೆಯ ಬಾಗಿಲನ್ನು ಆಯುಧದಿಂದ ಮೀಟಿ ಕಳ್ಳತನ ಮಾಡುವ ಉದ್ದೇಶದಿಂದ ಒಳಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆ ಕಾರಣ ಆರೋಪಿತರಾದ ನೀವು ಭಾ.ದ.ಸಂ. ಕಲಂ **457** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂ:

ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ:**1** ರವರ ಮನೆಯಲ್ಲಿದ್ದ ಗಾದ್ರೇಜ್ ಬೀರುವಿನಲಿದ್ದ **30** ಗ್ರಾಂ ತೂಕದ ಚಿನ್ನದ ಒಡವೆ ಮತ್ತು ರೂ **80000** ನಗದನ್ನು ಕಳ್ಳತನ ಮಾಡಿರುತ್ತೀರಿ. ಆ ಕಾರಣ ಆರೋಪಿಯಾದ ನೀವು ಭಾ.ದ.ಸಂ. ಕಲಂ **380** ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ದೋಷಾರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಟ್ಟಿರುತ್ತದೆ ಎಂದು ಈ ಮೂಲಕ ನಿರ್ದೇಶಿಸಲಾಗಿದೆ.

**Sd/-**

( ಸಿ. ವೀರಭದ್ರಯ್ಯ )

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.